

ಇಲ್ಲವೇ ಮಾತನಾಡಲು ಬರದೇ ಇರಬಹುದು. ಅದಕ್ಕೆ ನರದೋಷವೇ ಮುಖ್ಯ ಕಾರಣವಾಗಿರುತ್ತದೆ. ಎಲ್ಲ ಸಮಸ್ಯೆಗೂ ಚಿಕಿತ್ಸೆ ಇದ್ದರೂ ಕೆಲ ತೊಂದರೆಯನ್ನು ಸಂಪೂರ್ಣ ಗುಣಪಡಿಸಲು ಸಾಧ್ಯವಿಲ್ಲ. ದೈಹಿಕ ಸಮಸ್ಯೆಯಂತೆ ಮಾನಸಿಕ ಸಮಸ್ಯೆಗೆ ಕೊನೆ ಹೇಳುವುದು ಸುಲಭದ ಮಾತಲ್ಲ. ಇಂತಹ ಪ್ರಕರಣಗಳಿಗೆ ಒಳಗಾದ ಮಕ್ಕಳಿಗೆ ಕೌಶಲವನ್ನು ಅಭಿವೃದ್ಧಿಪಡಿಸುವ ಶಿಕ್ಷಣವನ್ನು ನೀಡಬೇಕಾಗುತ್ತದೆ. ಪರಿಣತ ಥೆರಪಿಸ್ಟ್‌ಗಳು, ಪೋಷಕರು, ಶಿಕ್ಷಕರು ಒಟ್ಟಾಗಿ ಆ ಮಕ್ಕಳಿಗೆ ಸ್ವಾಭಿಮಾನದ ಬದುಕನ್ನು ಕಟ್ಟಬೇಕಾಗುತ್ತದೆ.

ಸಾಮಾನ್ಯವಾಗಿ ಇಂಥ ಮಕ್ಕಳಿಗಾಗಿಯೇ ವಿಶೇಷ ಶಾಲೆಗಳು ಇವೆ. ಅವು ಪುಟ್ಟ ಗುಂಪುಗಳನ್ನು ರೂಪಿಸಿ ಬದುಕನ್ನು ಕಲಿಸುತ್ತವೆ. ಅಗತ್ಯ ಇದ್ದರೆ ಒಬ್ಬ ಮಗುವಿಗೆ ಒಬ್ಬ ಶಿಕ್ಷಕ ನಿಂತು ಕಲಿಸುತ್ತಾರೆ. ಸಾಮಾನ್ಯ ಶಾಲೆಯಲ್ಲಿಯೇ ಅಂತಹ ಮಕ್ಕಳು ಓದುತ್ತಿದ್ದಲ್ಲಿ ಪರಿಣತ ಟೀಚರ್ ಸಹಾಯವೂ ಸಿಗುತ್ತದೆ. ಅಂತಹ ಇನ್‌ಕ್ಲೂಸಿವ್ ಶಾಲೆಯಲ್ಲಿ ಮಕ್ಕಳ ಬೌದ್ಧಿಕ ಸಾಮರ್ಥ್ಯದ ಮೇಲೆ ಪರೀಕ್ಷೆಯನ್ನು ಮಾಡುತ್ತಾರೆ. ಸಾಮಾನ್ಯ ಮಕ್ಕಳ ತಿಳಿವಳಿಕೆಯ ಮಟ್ಟವನ್ನು ಗುರುತಿಸಲು ರೂಪಿಸುವ ಪ್ರಶ್ನೆಪತ್ರಿಕೆಯಂತೆ, ಬೌದ್ಧಿಕ ವೈಕಲ್ಯ ಮಕ್ಕಳಿಗೆ ಇರುವುದಿಲ್ಲ. ಅವರಿಗಾಗಿ ಸರಳ ಪ್ರಶ್ನೆ ಪತ್ರಿಕೆಯನ್ನು ನೀಡುತ್ತಾರೆ. ವಿಶೇಷ ಶಾಲೆಗಳಲ್ಲಿ ಅವರ ಮಾನಸಿಕ ಸ್ಥಿತಿಯ ಮೇಲೆಯೇ ಸಂಪೂರ್ಣ ಚಟುವಟಿಕೆ ನಡೆಯುತ್ತದೆ. ಲೆಕ್ಕವನ್ನು ಕಲಿಸಬೇಕು ಎಂಬ ವೇಳಾಪಟ್ಟಿಗೆ ಮಗು ಸ್ಪಂದಿಸಲಿಲ್ಲ ಎಂದ ಪಕ್ಷದಲ್ಲಿ ಆ ಕ್ಷಣಕ್ಕೆ ಮಗುವಿಗೆ ಇಷ್ಟ ಆಗುವ, ಅದು ಒಳಗೊಳ್ಳುವ ಚಟುವಟಿಕೆಯನ್ನು ಮಾಡುತ್ತಾರೆ. ಕೆಲವೊಮ್ಮೆ ಆ ಮಕ್ಕಳ ಪಾಲಕರು ಇಲ್ಲದಿರುವ ಸಂದರ್ಭ ಇದ್ದರೆ, ಮಗು ಸ್ವತಂತ್ರವಾಗಿ ಬದುಕನ್ನು ನಿಭಾಯಿಸಲು ಯಾವುದಾದರೂ ಒಂದು ಕೆಲಸವನ್ನು ಕಲಿಸಲಾಗುತ್ತದೆ. ಕೌಶಲ ಆಧಾರಿತ ಕೆಲಸದಿಂದ ಸಂಪಾದನೆ ಮಾಡುವುದನ್ನು ಕಲಿಸುವುದೂ ಪಠ್ಯದ ಭಾಗವಾಗಿತ್ತದೆ. ಶೈಕ್ಷಣಿಕ ಸಾಧನೆ ಹೊರತಾಗಿ ಅವರಿಗೆ ಬೇರೆ ಬೇರೆ ತರಬೇತಿಗಳು ಸಿಗುತ್ತವೆ. ಜೊತೆಗೆ ಸರ್ಕಾರದಿಂದಲೂ ಪ್ರೋತ್ಸಾಹ ಸಿಗುತ್ತದೆ.



ಬೌದ್ಧಿಕ ನಿಶ್ಶಕ್ತಿ ಹೇಗೆ ಕಣ್ಣಿಗೆ ಕಾಣಿಸುವುದಿಲ್ಲವೋ ಹಾಗೆಯೇ ಕಲಿಕಾ ನ್ಯೂನತೆ ಕೂಡ. ಅದನ್ನು ವೈಜ್ಞಾನಿಕ ದೃಷ್ಟಿಯಲ್ಲಿ ಅವಲೋಕಿಸಿದಾಗ ಮಾತ್ರ ಗೊತ್ತಾಗುತ್ತದೆ. ಕಲಿಕಾ ನ್ಯೂನತೆ ಇರುವ ಮಕ್ಕಳಲ್ಲಿ ಕೆಲವರಿಗೆ ಓದಿದ್ದು ಅರ್ಥ ಆಗುವುದಿಲ್ಲ. ಅರ್ಥ ಆದರೂ ಬರೆಯಲು ಬರುವುದಿಲ್ಲ. ಆಗ ತರಬೇತಿ ಪಡೆದ ವಿಶೇಷ ಪರಿಣತ ಶಿಕ್ಷಕರ ಸಹಾಯ ಅವಶ್ಯವಾಗುತ್ತದೆ. ಆಟಿಸಂನಲ್ಲೂ ನಾನಾ ಮಾದರಿಗಳು ಇವೆ. ಕೆಲ ಮಕ್ಕಳು ಚೆನ್ನಾಗಿಯೇ ಓದುತ್ತಾರೆ. ಆದರೆ ಸಾಮಾಜಿಕ ಕೌಶಲ ಇರುವುದಿಲ್ಲ. ಮತ್ತೊಬ್ಬರ ಅಭಿಪ್ರಾಯವನ್ನೂ ಗ್ರಹಿಸುವುದಿಲ್ಲ. ಮೇಲ್ನೋಟದಿಂದ ಸಮಸ್ಯೆಯನ್ನು ಗುರುತಿಸಲು ಆಗುವುದಿಲ್ಲ. ಮಗು ಆಟಿಸಂ, ಬೌದ್ಧಿಕ ಅಥವಾ ಕಲಿಕಾ ನ್ಯೂನತೆಯನ್ನು ಎದುರಿಸುತ್ತಿದೆಯೇ ಎನ್ನುವುದನ್ನು ಕ್ಲಿನಿಕಲ್ ಸೈಕಾಲಜಿಸ್ಟ್ ಪರೀಕ್ಷೆಯಿಂದ ದೃಢೀಕರಿಸುತ್ತಾರೆ. ಅವರು ಮಗುವಿನ ಸ್ಥಿತಿಯನ್ನು ಆಧರಿಸಿ ಸಲಹೆ ನೀಡುತ್ತಾರೆ. ಅವರ ಸೂಚನೆಯಂತೆ ಥೆರಪಿ, ತರಬೇತಿ ನೀಡುವುದನ್ನು ವಿಶೇಷ ಶಾಲೆಗಳು ರೂಢಿಸಿಕೊಂಡಿವೆ. ಕೆಲ ಮಕ್ಕಳು ಹೆಚ್ಚು ನಗುವುದು, ಶಬ್ದಕ್ಕೆ ಕಿವಿ ಮುಚ್ಚಿಕೊಳ್ಳುವುದು, ಇಲ್ಲವೆ ನಡವಳಿಕೆಯ ಸಮಸ್ಯೆಯಿಂದ ಬಳಲುತ್ತಿದ್ದರೆ ಅದಕ್ಕೂ ಸೂಕ್ತ ಥೆರಪಿ ಬೇಕಾಗುತ್ತದೆ.

## ಸಾಮರ್ಥ್ಯ ಉತ್ತೇಜನ

ಮಗುವನ್ನು ಸ್ವತಂತ್ರವಾಗಲು ಮನಶಾಸ್ತ್ರದ ಭಾಷೆಯಲ್ಲಿ ಕ್ರಿಯಾತ್ಮಕ ಮೌಲ್ಯಮಾಪನ (functional assessment) ಅಂತೀವಿ. ಬಾಲ್ ಹಿಡಿಯಲು ಬಂದರೆ ಅದನ್ನು ಎಸೆಯುವುದನ್ನು ಕಲಿಸಬಹುದು. ಅದನ್ನೇ ಮಕ್ಕಳಲ್ಲಿ ಕೌಶಲವನ್ನು ಉತ್ತೇಜಿಸುವುದು ಎನ್ನುತ್ತೇವೆ. ಮಗುವಿನ ಸಾಮರ್ಥ್ಯ ಏನು ಎನ್ನುವುದನ್ನು ಗುರುತಿಸಿ ಅದನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ಮಗುವಿಗೆ ಶಿಕ್ಷಣದಲ್ಲಿ ಸಾಧ್ಯತೆ ಇಲ್ಲವೆಂದು ಗೊತ್ತಾದರೆ ಬೇರೆ ಉದ್ಯೋಗ ಸಂಬಂಧಿತ ಕೌಶಲ ಮತ್ತು ತರಬೇತಿ ನೀಡುವ ನಿಟ್ಟಿನಲ್ಲಿ ನಮ್ಮ ಕಾರ್ಯ ಸ್ವರೂಪ ಇರಬೇಕು.

**–ಡಾ. ಮೇಘನಾ ಕಶ್ಯಪ್,**
ಕ್ಲಿನಿಕಲ್ ಸೈಕಾಲಜಿಸ್ಟ್







